


ನಂದಿಬೆಟ್ಟದ ಮೇಲಿನಿಂದ ಕಾಣುವ ಕಳವಾರಬೆಟ್ಟವನ್ನು ಸುತ್ತುವರೆದ ಹಾಲ್ಗಡಲಿನಂತಹ ಮೋಡಗಳ ದೃಶ್ಯ





ಯೋಗನಂದೀಶ್ವರ ದೇವಸ್ಥಾನದಲ್ಲಿ ಮರಾಠರ ಕಾಲದ ದೇವನಾಗರಿ ಲಿಪಿಯ ಶಾಸನ

ಸುಣ್ಣ ಬಳಿದಿರುವುದರಿಂದ ಸರಿಯಾಗಿ ಗಮನಿಸಿದರೆ ಮಾತ್ರ ಈ ಬರಹ ಕಾಣಿಸುತ್ತದೆ. ಅರೆ! ಏನಿದು ಸ್ಯಾಂಕಿ ಎಂಬ ಹೆಸರಿದೆಯಲ್ಲಾ, ಎಂದು ಅಚ್ಚರಿಗೊಂಡು ತೋಟಗಾರಿಕಾ ಇಲಾಖೆಯ ನಿವೃತ್ತ ಅಧಿಕಾರಿ ಭಕ್ತರಹಳ್ಳಿ ಸಂತೆ ನಾರಾಯಣಸ್ವಾಮಿ ಅವರಿಗೆ ದೂರವಾಣಿ ಕರೆ ಮಾಡಿ ವಿಚಾರಿಸಿದೆ.

'ಸುಮಾರು ಒಂದೂವರೆ ಶತಮಾನದ ಹಿಂದೆ ನಂದಿಬೆಟ್ಟಕ್ಕೆ ಬರುವ ಸಾರ್ವಜನಿಕರು ಉಳಿಯಲೆಂದು ಸ್ಯಾಂಕಿ ಕಟ್ಟಿಸಿದ್ದ ಕೋಣೆಗಳಿವು. ಮೈಸೂರು ರಾಜ್ಯದಲ್ಲಿ ಬೌರಿಂಗ್ ಅವರು ಕಮೀಷನರ್ ಆಗಿದ್ದಾಗ ಅಂದರೆ 1864ರಲ್ಲಿ ರಿಚರ್ಡ್ ಸ್ಯಾಂಕಿ ಮೈಸೂರು ಸರ್ಕಾರದ ಚೀಫ್ ಎಂಜಿನಿಯರ್ ಆದರು. ವಿಧಾನಸೌಧದ ಮುಂದೆ ಇರುವ ಹೈಕೋರ್ಟ್ ಕಾರ್ಯ ನಿರ್ವಹಿಸುತ್ತಿರುವ ಸುಂದರ ವಾಸ್ತುಶೈಲಿಯ ಕೆಂಪು ಬಣ್ಣದ ಕಟ್ಟಡ, ಕಸ್ತೂರಬಾ ರಸ್ತೆಯಲ್ಲಿನ ಸರ್ಕಾರಿ ವಸ್ತುಸಂಗ್ರಹಾಲಯ ಮತ್ತು ಮಲ್ಲೇಶ್ವರಂ, ವಯ್ಯಾಲಿಕಾವಲ್ ಹಾಗೂ ಸದಾಶಿವ ನಗರ ಈ ಬಡಾವಣೆಗಳ ನಡುವೆ ಇರುವ ಸ್ಯಾಂಕಿ ಟ್ಯಾಂಕ್ ಇವೆಲ್ಲ ಲೆಫ್ಟಿನೆಂಟ್ ಜನರಲ್ ಸರ್ ರಿಚರ್ಡ್ ಸ್ಯಾಂಕಿ ಅವರ ಕೊಡುಗೆಗಳು. ಕಬ್ಬನ್ ಪಾರ್ಕ್, ಮೇಯೋ ಹಾಲ್ ಮತ್ತು ಸೇಂಟ್ ಆಂಡ್ರ್ಯೂ ಚರ್ಚ್ ವಿನ್ಯಾಸ ರೂಪಿಸಿದ್ದು ಸಹ ರಿಚರ್ಡ್ ಸ್ಯಾಂಕಿಯೇ' ಎಂದು ವಿವರಿಸಿದರು.

'ಬ್ರಿಟಿಷರಿಗೂ ಮುಂಚೆ ನಂದಿ ಬೆಟ್ಟದ ದೇವಸ್ಥಾನದ ಎರಡೂ ಬದಿಗಳಲ್ಲಿ ಹಂಪೆಯಲ್ಲಿರುವಂತೆ ಸಾಲು ಸಾಲಾಗಿ ಕಲ್ಲಿನ ಮಂಟಪಗಳಿದ್ದವು. ಇಲ್ಲಿಗೆ ಬಂದ ಜನರು ಮಂಟಪಗಳ ಕೆಳಗೆ ಅಡುಗೆ ಮಾಡಿಕೊಂಡು ತಂಗುತ್ತಿದ್ದರು. ನಂದಿಗಿರಿಧಾಮದ ಹವಾಮಾನಕ್ಕೆ ಮನಸೋತ ಬ್ರಿಟಿಷರು ಇಲ್ಲಿ ಕಬ್ಬನ್ ಹೌಸ್, ಓಕ್ ಲ್ಯಾಂಡ್ಸ್ ಹೌಸ್ ಮುಂತಾದ ಹಲವು ಬಂಗಲೆಗಳು, ಕಟ್ಟಡಗಳನ್ನು ಕಟ್ಟಿದರು. ಆಗ ಸಾರ್ವಜನಿಕರಿಗೆ ಅನುಕೂಲವಾಗಲೆಂದು ರಿಚರ್ಡ್ ಸ್ಯಾಂಕಿ ಅವರು ಮಂಟಪಗಳನ್ನು ಸೇರಿಸಿ ಗೋಡೆಗಳನ್ನು ಕಟ್ಟಿ ಉಳಿಯಲು ಕೋಣೆಗಳಾಗುವಂತೆ ಪರಿವರ್ತಿಸಿದರು. ಅದಕ್ಕೆ ಸ್ಯಾಂಕೀಸ್ ರೂಮ್ಸ್ ಎಂದು ಕರೆದರು' ಎಂದು ಇತಿಹಾಸಕಾರ ವೇಮಗಲ್ ಸೋಮಶೇಖರ್ ಮತ್ತಷ್ಟು ಮಾಹಿತಿ ನೀಡಿದರು.

ಒಂಬತ್ತು ಶತಮಾನಗಳ ಹಿಂದೆ, ಅಂದರೆ 11ನೇ ಶತಮಾನದಲ್ಲಿ ಚೋಳರಿಂದ ನಿರ್ಮಾಣವಾದ ಯೋಗನಂದೀಶ್ವರ ದೇವಸ್ಥಾನ ನೋಡಿಕೊಂಡು, ಮುನ್ನೂರೈವತ್ತು ವರ್ಷ ಹಿಂದಿನ ಶಾಸನದ ದೇವನಾಗರಿ ಅಕ್ಷರದ ಮೇಲೆ ಬೆರಳಾಡಿಸಿ, ನೂರೈವತ್ತು ವರ್ಷದ ಹಿಂದಿದ್ದ ಎಂಜಿನಿಯರನ ಕೊಡುಗೆ ಸ್ಮರಿಸಿ ಬಂದ ನಮಗೆ ಕಾಲನ ಕ್ಯಾಪ್ಸೂಲಿನಲ್ಲಿ ಒಂದು ಸುತ್ತು ಹೋಗಿ ಬಂದಂತಾಗಿತ್ತು. ■